ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

BANGALORE ELECTRICITY SUPPLY COMPANY LIMITED
(wholly owned Government of Karnataka undertaking)

ದೂರವಾಣಿ:08154-251102
ಇ-ಮೈಲ್ : eeChinthamanidivision@bescom.co.in
: eebescomcmy@gmail.com

ರವರ ಕಚೇರಿ
ಕಾರ್ಯನಿರ್ವಾಹಕ ಇಂಜನಿಯರ್(ವಿ)
ಬೆ.ವಿ.ಕಂ, ವಿಭಾಗೀಯ ಕಛೇರಿ,
ಚಿಂತಾಮಣಿ-563125.

ಸಂಖ್ಯೆ: ಕಾನಿಇಂ(ವಿ)/ಸ.ಕಾ.ನಿ.ಇ/ಸ.ಇ(ತಾ)/ಚಿಂ/2025-26/ 6626-27

ದಿನಾಂಕ: 17 JAN 2026

ರವರಿಗೆ,

ಶ್ರೀ/ಶ್ರೀಮತಿ. ಜ ಸತೀಶ್ ಬಿನ್ ಗೋಪಾಲಪ್ಪ,

ಚಿಕ್ಕತೇಕಹಳ್ಳಿ ಗ್ರಾಮ,

ಶಿಡ್ಲಘಟ್ಟ.

ಮಾನ್ಯರೇ,

ವಿಷಯ: ಚಿಕ್ಕತೇಕಹಳ್ಳಿ ಗ್ರಾಮದಲ್ಲಿರುವ ತಮ್ಮ ಉದ್ದೇಶಿತ ನೀರಾವರಿ ಕೊಳವೆ ಭಾವಿಗೆ 25ಕೆವಿಎ ಪರಿವರ್ತಕ ಕೇಂದ್ರವನ್ನು ಅಳವಡಿಸಿ 10 ಅಶ್ವ ಶಕ್ತಿ ಹೊರೆಯ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ಬಗ್ಗೆ (ಸ್ವಯಂ ಕಾರ್ಯನಿರ್ವಹಣೆ ಅಡಿ).

ಉಲ್ಲೇಖ: ಅಕೌಂಟ್ ಐಡಿ ಸಂಖ್ಯೆ:1233101260001/05.01.2026

>>>><<<<

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಮನವಿಯಲ್ಲಿ ನೀವು ಕೋರಿರುವಂತೆ ಶಿಡ್ಲಘಟ್ಟ ಗ್ರಾಮೀಣ ಉಪವಿಭಾಗದ ದಿಬ್ಬೂರಹಳ್ಳಿ ರ ಶಾಖಾ ವ್ಯಾಪ್ತಿಯ ಚಿಕ್ಕತೇಕಹಳ್ಳಿ ಗ್ರಾಮ ಸರ್ವೆ ನಂ.70/2 ರ ವಿಳಾಸದಲ್ಲಿರುವ ತಮ್ಮ ಉದ್ದೇಶಿತ ನೀರಾವರಿ ಕೊಳವೆ ಭಾವಿಗೆ 25ಕೆವಿಎ ಪರಿವರ್ತಕ ಕೇಂದ್ರವನ್ನು 10 ಅಶ ಶಕ್ತಿ ಹೊರೆಯ ವಿದ್ಯುತ್ ಸಂಪರ್ಕ ಕಲ್ಪಿಸಲು ಸ್ವಯಂ ಕಾರ್ಯನಿರ್ವಹಣೆ ಅಡಿ ಕಂಪನಿ ಕಾರ್ಯಾಲಯದ ಆದೇಶ ಸಂಖ್ಯೆ ಬೆವಿಕಂ/ಮುಪ್ರವ್ಯ(ಯೋ)/ಉಪ್ರವ್ಯ-1/ಸಪ್ರವ್ಯ/2023-24/ಸಿವೈಎಸ್-193 ದಿನಾಂಕ-12.10.2023 ರ ಅನ್ವಯ ಈ ಕೆಳಗಿನಂತೆ ಸೂಚಿಸಿರುವ ಷರತ್ತುಗಳ ಮೇರೆಗೆ ಮಂಜೂರು ಮಾಡಲಾಗಿರುತ್ತದೆ.

1. ಸದರಿ ಮಂಜೂರಾತಿಯು ಈ ದಿನಾಂಕದಿಂದ 90 ದಿವಸಗಳವರೆಗೆ ಚಾಲ್ತಿಯಲ್ಲಿರುತ್ತದೆ.
2. ಪ್ರಸ್ತುತ ಚಾಲ್ತಿಯಲ್ಲಿರುವ ಎಲ್.ಟಿ.-4(ಎ) ಜಕಾತಿಯು ನಿಮ್ಮ ಸ್ಥಾವರಕ್ಕೆ ಅನ್ವಯಿಸಲ್ಪಡುತ್ತದೆ
3. ಈ ಕೆಳಕಂಡ ಮೊತ್ತವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್, ಬೆವಿಕಂ. ಶಿಡ್ಲಘಟ್ಟ ಗ್ರಾಮೀಣ ಉಪ ವಿಭಾಗ ರವರ ಹೆಸರಿನಲ್ಲಿ ಡಿಡಿ ಮುಖಾಂತರ ಈ ಪತ್ರದ ದಿನಾಂಕದಿಂದ 90 ದಿನಗೊಳಗಾಗಿ ಪಾವತಿಸಬೇಕು.

| ಠೇವಣಿ ವಿವರಗಳು (ಲೆಕ್ಕ ಶೀರ್ಷಿಕೆ) | ಠೇವಣಿಯ ಮೊತ್ತ | ರೂ ಅಕ್ಷರಗಳಲ್ಲಿ |
|---|---|---|
| 2ತಿಂಗಳ ಕನಿಷ್ಠ ಠೇವಣಿ ಬಾಬ್ತು | **24900.00** | ರೂ. ಇಪ್ಪತ್ನಾಲ್ಕು ಸಾವಿರದ ಒಂಬೈ ನೂರು ಮಾತ್ರ |
| ಸಾಮಗ್ರಿಗಳ ತಪಾಸಣಾ ಶುಲ್ಕ | **5000.00** | ರೂ. ಐದು ಸಾವಿರ ಮಾತ್ರ |
| ಪರಿವರ್ತಕ ಪರೀಕ್ಷೆ ಶುಲ್ಕ | **1000.00** | ರೂ. ಒಂದು ಸಾವಿರ ಮಾತ್ರ |
| ಮಾಪಕ ಶುಲ್ಕ | **2808.00** | ರೂ. ಎರಡು ಸಾವಿರದ ಎಂಟು ನೂರ ಎಂಟು ಮಾತ್ರ |
| ಮಾಪಕ ಪೆಟ್ಟಿಗೆ ಶುಲ್ಕ | **4300.00** | ರೂ. ನಾಲ್ಕು ಸಾವಿರದ ಮೂರು ನೂರು ಮಾತ್ರ |
| ಮೇಲ್ವಿಚಾರಣಾ ಶುಲ್ಕ | **250.00** | |
| | **38258.00** | |

2....

Scanned with OKEN Scanner

4. ಪಾವತಿ ಮಾಡಿರುವ ಠೇವಣಿಗಳ ಹಾಗು ಇತರೆ ಶುಲ್ಕಗಳ ಪಾವತಿ ಪ್ರಮಾಣ ಪತ್ರವನ್ನು ಸಂಬಂಧ ಪಟ್ಟ ಉಪ-ವಿಭಾಗದ ಸಹಾಯಕ ಲೆಕ್ಕಾಧಿಕಾರಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಪ್ರಮಾಣೀಕರಿಸಿ, ಮಂಜೂರಾತಿ ನೀಡಲು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.
5. ಮುಂದಿನ ದಿನಗಳಲ್ಲಿ ಯಾವುದೇ ವತ್ಯಾಸ ಮೊತ್ತವು ಪಾವತಿಸಬೇಕಾದಲ್ಲಿ, ಕೂಡಲೇ ಬೆ.ವಿ.ಕಂ ಗೆ ಪಾವತಿಸಬೇಕು.
6. ವಿದ್ಯುತ್ ಸಂಪರ್ಕಕ್ಕಾಗಿ ನೀವು ನೀಡಿರುವ ದಾಖಲೆಗಳು ನಕಲಿ/ಸುಳ್ಳು ಎಂದು ಕಂಡು ಬಂದಲ್ಲಿ ಕೆ.ಇ.ಆರ್.ಸಿ ನಿಯಮ 43.00 ರನ್ವಯ ಕಟ್ಟಡಕ್ಕೆ ನೀಡಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ವಿದ್ಯುತ್ ಮಂಜೂರಾತಿಯನ್ನು ರದ್ದುಪಡಿಸಿ, ತಾವು ಬೆ.ವಿ.ಕಂ.ಗೆ ಪಾವತಿಸಿರುವ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ನಿಬಂಧನೆಗೊಳಪಟ್ಟು ಮಂಜೂರು ಮಾಡಲಾಗಿದೆ.
7. ಕಾಮಗಾರಿಗಳನ್ನು ಕರ್ನಾಟಕ ರಾಜ್ಯದ ಅನುಮತಿ ಪಡೆದ ಪ್ರಥಮ ದರ್ಜೆ ಗುತ್ತಿಗೆದಾರರ ಮುಖೇನ ಬೆವಿಕಂ ನ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಿರ್ವಹಿಸುವುದು.
8. ಪರಿವರ್ತಕಗಳು, ವಾಹಕಗಳು, ಮೀಟರಿಂಗ್ ಕ್ಯುಬಿಕಲ್, ಭೂಗತ ಕೇಬಲ್ ಮುಂತಾದ ಸಾಮಾಗ್ರಿಗಳು IE/BESCOM ಮಾನದಂಡಗಳ ಪ್ರಕಾರ ಇರಬೇಕು ಮತ್ತು ಎಲ್ಲಾ ಸಾಮಾಗ್ರಿಗಳ ಗುಣಮಟ್ಟವನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಖರೀದಿ ಮಾಡುವ ಮೊದಲೇ ಪರಿಶೀಲಿಸಬೇಕು.
9. ಬೆವಿಕಂ ಅನುಮೋದನೆ ಪಡೆದ ಮಾರಾಟದಾರರಿಂದ (approved vendor) ಸಾಮಾಗ್ರಿಗಳ ಖರೀದಿ ಮಾಡಿರುವುದಕ್ಕೆ ದಾಖಲಾತಿಗಾಗಿ ಬಿಲ್ಲುಗಳನ್ನು / invoices ಗಳನ್ನು ಸಲ್ಲಿಸಬೇಕು. ನಿಗಮ ಕಛೇರಿಯ ಸುತ್ತೋಲೆ ಸಂಖ್ಯೆ BESCOM/BC-9/CGM (CA)/DGM (CA-3)/F-752/13-14/CYS-113 dated 29.8.2013 ಪ್ರಕಾರ ಅರ್ಜಿದಾರರು ಪಾಲಿಮರ್ ವಿದ್ಯುತ್ ನಿರೋಧಕವನ್ನು ಮತ್ತು 5 ಸ್ಟಾರ್ ಪರಿವರ್ತಕ ವನ್ನು ಮಾತ್ರ ಬಳಸಬೇಕು.
10. ಎಲ್ಲಾ ಕೆಲಸವು ಅಂದಾಜು ಪಟ್ಟಿ ಪ್ರಕಾರ ಪೂರ್ಣಗೊಂಡ ನಂತರ ವಿತರಣಾ ಕೇಂದ್ರ ಮತ್ತು ಅದರ ಸಂಬಂಧಪಟ್ಟ ಸಾಮಾಗ್ರಿಗಳನ್ನು ಬೆವಿಕಂ ರವರಿಗೆ ಹಸ್ತಾಂತರಿಸುವುದು.
11. ಕಾಮಗಾರಿಗಳಿಗೆ ಬಳಸಿದ ಸಾಮಾಗ್ರಿಗಳ ಗುಣಮಟ್ಟವು ಮತ್ತು ಕಾಮಗಾರಿಯ ಗುಣಮಟ್ಟವನ್ನು, ಬೆವಿಕಂರವರು ಮಾರ್ಗಗಳನ್ನು ಮತ್ತು ಸಾಮಾಗ್ರಿಗಳನ್ನು ತೆಗೆದುಕೊಂಡ ದಿನದಿಂದ ಐದು ವರ್ಷದ ಅವಧಿವರೆಗೂ ಖಾತರಿ ನೀಡಬೇಕು. ಮುಂದೆ ಆಗುವ ಯಾವುದೇ ಭಾದ್ಯತೆಗಳಿಗೆ ಬೆವಿಕಂ ಜವಾಬ್ದಾರಿಯಾಗಿರುವುದಿಲ್ಲ.
12. ಮೇಲೆ ತಿಳಿಸಿರುವ ಹಣದ ಪಾವತಿಯನ್ನು 90 ದಿನದೊಳಗಾಗಿ ಖಡ್ಡಾಯವಾಗಿ ಪಾವತಿ ಮಾಡಬೇಕು, ವಿಳಂಬವಾದಲ್ಲಿ ಹಾಗೂ ಮೇಲೆ ತಿಳಿಸಿರುವ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ಕೆ.ಇ.ಆರ್.ಸಿ ತಿದ್ದುಪಡಿ ಷರತ್ತು 4.03(ii) ಪ್ರಕಾರ ವಿದ್ಯುತ್ ಮಂಜುರಾತಿಯನ್ನು ರದ್ದು ಪಡಿಸಲಾಗುವುದು.

ತಮ್ಮ ವಿಶ್ವಾಸಿ

(ಶ್ರೀನಾಥ್ ಕೆ)

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನ ವಿಭಾಗ, ಬೆವಿಕಂ,
ಚಿಂತಾಮಣಿ.

ಪ್ರತಿಗಳು:-
- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆ.ವಿ.ಕಂ, ಶಿಡ್ಲಘಟ್ಟ ಗ್ರಾಮೀಣ ಉಪ ವಿಭಾಗ ರವರ ಮಾಹಿತಿಗಾಗಿ.
- ಮಹಾ ಕಡತ.

Scanned with OKEN Scanner